## ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** ಆರೋಗ್ಯ ಕರ್ನಾಟಕ ಯೋಜನೆಯಡಿ ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಆರೈಕೆಗಳು, ತೃತೀಯ ಹಂತದ ಆರೈಕೆಗಳು ಮತ್ತು ತುರ್ತು ಆರೋಗ್ಯ ಆರೈಕೆ ಚಿಕಿತ್ಸೆಗಳನ್ನು ಒದಗಿಸುವ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ವೆಚ್ಚ ಮರುಪಾವತಿ ಮಾಡುವ ಬಗ್ಗೆ.

SATS

**ಓದಲಾಗಿದೆ:** 1) ಸರ್ಕಾರದ ಆದೇಶ ಸಂಖ್ಯೆ: ಆಕುಕ 91 ಸಿಜಿಇ 2017(ಭಾಗ-1), ದಿನಾಂಕ: 01-03-2018.

224
28 APR 2018

2) ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅವರ ಏಕ ಕಡತ ಸಂಖ್ಯೆ.ಹೆಚ್‌ಎಫ್‌ಡಬ್ಲ್ಯೂ/ಎಸ್‌ಎಎಸ್‌ಟಿ/ ಎಂಎಂ-01/2018-19.

ಪ್ರಸ್ತಾವನೆ:

ಮೇಲೆ ಓದಲಾದ ಕ್ರಮ ಸಂಖ್ಯೆ(1)ರ ಸರ್ಕಾರದ ಆದೇಶದದಲ್ಲಿ ಕರ್ನಾಟಕ ರಾಜ್ಯದ ಎಲ್ಲಾ ನಿವಾಸಿಗಳಿಗೆ "ಆರೋಗ್ಯ ಕರ್ನಾಟಕ " ಎನ್ನುವ ಹೊಸ ಯೋಜನೆಯ ಮೂಲಕ ನಿರ್ದಿಷ್ಟ ಪಡಿಸಿದ ಪ್ರಾಥಮಿಕ ಪ್ರಾಥಮಿಕ ಆರೋಗ್ಯ ಆರೈಕೆ, ಸಾಮಾನ್ಯ ದ್ವಿತೀಯ ಹಂತದ ಆರೋಗ್ಯ ಆರೈಕೆ, ಸಂಕೀರ್ಣ ದ್ವಿತೀಯ ಹಂತದ ಆರೈಕೆ, ತೃತೀಯ ಹಂತದ ಆರೈಕೆ ಮತ್ತು ತುರ್ತು ಆರೋಗ್ಯ ಆರೈಕೆಗಳನ್ನು ಒದಗಿಸಲು ಸರ್ಕಾರವು ಆಡಳಿತಾತ್ಮಕ ಅನುಮೋದನೆಯನ್ನು ನೀಡಿದೆ. ಸದರಿ ಆದೇಶ ಭಾಗದ ಕ್ರಮ ಸಂಖ್ಯೆ.48ರಲ್ಲಿ ಸಂಕೀರ್ಣ ದ್ವಿತೀಯ ಹಂತದ ಆರೋಗ್ಯ ಆರೈಕೆಗಳು, ತೃತೀಯ ಹಂತದ ಆರೋಗ್ಯ ಆರೈಕೆಗಳು ಮತ್ತು ತುರ್ತು ಆರೋಗ್ಯ ಆರೈಕೆ ಚಿಕಿತ್ಸೆಗಳಿಗೆ (ಆದೇಶದ ಅನುಬಂಧ 2ಬಿ, 3 ಮತ್ತು 4ರಲ್ಲಿ ಕ್ರಮವಾಗಿ ಸೂಚಿಸಲಾಗಿದೆ) ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ವೆಚ್ಚ ಮರುಪಾವತಿ ಮಾಡುವ ಉದ್ದೇಶಕ್ಕಾಗಿ ಪ್ಯಾಕೇಜ್ ದರ ಮತ್ತು ವಿಧಾನಗಳ ಕುರಿತು ಪ್ರತ್ಯೇಕ ಆದೇಶವನ್ನು ಹೊರಡಿಸಲಾಗುವುದು ಎಂದು ತಿಳಿಸಲಾಗಿದೆ.

ಮೇಲೆ ಓದಲಾದ ಕ್ರಮ ಸಂಖ್ಯೆ(2)ರ ಪತ್ರದಲ್ಲಿ ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಅವರು ದಿನಾಂಕ:01.03.2018ರಂದು ಹೊರಡಿಸಲಾದ ಸರ್ಕಾರದ ಆದೇಶ ಸಂಖ್ಯೆ. ಆಕುಕ 91 ಸಿಜಿಇ 2017(ಭಾಗ-1)ರಲ್ಲಿ ಸಾರ್ವತ್ರಿಕ ಆರೋಗ್ಯದ ಬಗ್ಗೆ ಆದೇಶವಿದ್ದು, ಅದರಂತೆ ಎಲ್ಲಾ ಸರ್ಕಾರಿ ಆಸ್ಪತ್ರೆಗಳು ಕಡ್ಡಾಯವಾಗಿ ನೋಂದಣಿ ಆಗ ಬೇಕಾಗಿದೆ. ಪ್ರಾಥಮಿಕ ಆರೋಗ್ಯ ಸೇವೆಗಳಿಗೆ ಹಾಗೂ ಸಾಮಾನ್ಯ ದ್ವಿತೀಯ ಹಂತದ ಸೇವೆಗಳಿಗೆ (ಸದರಿ ಆದೇಶದ ಅನುಬಂಧ-1 ಮತ್ತು 2ಎ) ಸಂಬಂಧಪಟ್ಟ ಆರೋಗ್ಯ ಸಂಸ್ಥೆಯ ಸಾಮಾನ್ಯ ಸೇವಾ ಶುಲ್ಕ ವಿಧಿಸಬಹುದಾಗಿರುತ್ತದೆ ಹಾಗೂ ಸರ್ಕಾರಿ ಆರೋಗ್ಯ ಸಂಸ್ಥೆಗೆ ಸರ್ಕಾರದ ವತಿಯಿಂದ ಸದರಿ ಚಿಕಿತ್ಸಾ ವಿಧಾನಗಳಿಗೆ ಯಾವುದೇ ರೀತಿಯ ಮರುಪಾವತಿ ಇರುವುದಿಲ್ಲ. ಸರ್ಕಾರಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳಲ್ಲಿ ಕ್ಲಿಷ್ಟಕರ ದ್ವಿತೀಯ ಹಂತದ ಚಿಕಿತ್ಸೆಗಾಗಿ ಹಾಗೂ ತೃತೀಯ ಹಂತದ ಖಾಯಿಲೆಗಳ ತುರ್ತು ಚಿಕಿತ್ಸಾ ವಿಧಾನಗಳಿಗಾಗಿ (ಸದರಿ ಆದೇಶದ ಅನುಬಂಧ 2ಬಿ. 3 ಮತ್ತು 4) ಪ್ಯಾಕೇಜ್ ದರಗಳಲ್ಲಿ(ಅನುಬಂಧ 7, 8, ಹಾಗೂ 9) ಮರು ಪಾವತಿಗೆ ಅರ್ಹವಾಗಿರುತ್ತದೆ.

Please circulate to all 11 hospitals

2.5.18

ನೋಂದಾಯಿತ ಖಾಸಗಿ ಆರೋಗ್ಯ ಸಂಸ್ಥೆಗಳ ಕಾರ್ಯವೈಖರಿ ಹಾಗೂ ಆರ್ಥಿಕ ಹೊರೆ ಗಮನದಲ್ಲಿಟ್ಟುಕೊಂಡು ಪ್ಯಾಕೇಜ್ ದರ ನಿರ್ಧರಿಸಿದ್ದು, ಸರ್ಕಾರಿ ಆರೋಗ್ಯ ಸೇವಾ ಸಂಸ್ಥೆಗಳಿಗೆ ನಿರ್ವಹಣೆಗಾಗಿ ಸರ್ಕಾರಿ ಅನುದಾನ ದೊರೆಯುತ್ತಿದ್ದು, ಮಾನವ ಸಂಪನ್ಮೂಲ ಪರಿಕರಗಳು ಹಾಗೂ ಔಷಧಿ ಸಾಮಗ್ರಿಗಳಿಗಾಗಿ ಆರ್ಥಿಕ ನೆರವನ್ನು ಸರ್ಕಾರದ ವತಿಯಿಂದ ನೀಡಲಾಗುತ್ತಿರುವುದರಿಂದ, ಸರ್ಕಾರಿ ಆರೋಗ್ಯ ಸೇವಾ ಸಂಸ್ಥೆಗಳಿಗೆ ವಿಶೇಷ ಪ್ಯಾಕೇಜ್ ದರ ನೀಡಲು ಸಮಿತಿಯೊಂದನ್ನು ರಚಿಸುವ ಬಗ್ಗೆ ಸಾರ್ವತ್ರಿಕ ಆರೋಗ್ಯ ಯೋಜನೆಯ ಪರಿಕಲ್ಪನೆಯ ಸಭೆಗಳಲ್ಲಿ ನಿರ್ಧರಿಸಲಾಗಿದೆ. ಆದ್ದರಿಂದ, ವಿಶೇಷ ದರ ನಿರ್ಧರಿಸುವ ಸಮಿತಿಯ ವರದಿ ಬರುವವರೆಗೆ ಆದೇಶ ಸಂಖ್ಯೆ. ಆಕುಕ 91 ಸಿಜಿಇ 2017(ಭಾಗ-1), ದಿನಾಂಕ:01.03.2018ರ ಅನುಬಂಧ 7,8, ಹಾಗೂ 9ರಲ್ಲಿರುವ ದರಗಳ ಶೇಕಡ 75ರಷ್ಟನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಗಳಿಗೆ ಮರುಪಾವತಿಸುವ ಬಗ್ಗೆ ಪ್ರಸ್ತಾವನೆಯನ್ನು ಸಲ್ಲಿಸಿರುತ್ತಾರೆ.

ಮೇಲ್ಕಂಡ ಪ್ರಸ್ತಾವನೆಯನ್ನು ಪರಿಶೀಲಿಸಿ ಈ ಕೆಳಕಂಡಂತೆ ಆದೇಶಿಸಲಾಗಿದೆ.

**ಸರ್ಕಾರದ ಆದೇಶ ಸಂಖ್ಯೆ: ಆಕುಕ 91 ಸಿಜಿಇ 2017(ಭಾಗ-1)**
**ಬೆಂಗಳೂರು, ದಿನಾಂಕ:26-04-2018**

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಹಿನ್ನೆಲೆಯಲ್ಲಿ, ಆರೋಗ್ಯ ಕರ್ನಾಟಕ ಯೋಜನೆ ಅಡಿ ಸರ್ಕಾರಿ ಸಾರ್ವಜನಿಕ ಆರೋಗ್ಯ ಸಂಸ್ಥೆಗಳ ಮೂಲಕ ಸಂಕೀರ್ಣ ದ್ವಿತೀಯ ಹಂತದ ಚಿಕಿತ್ಸೆ ಹಾಗೂ ತೃತೀಯ ಹಂತದ ಖಾಯಿಲೆ ಮತ್ತು ತುರ್ತು ಚಿಕಿತ್ಸಾ ವಿಧಾನಗಳಲ್ಲಿ ಒದಗಿಸುವ ಚಿಕಿತ್ಸೆಯ ವೆಚ್ಚನ್ನು ಆರೋಗ್ಯ ಕರ್ನಾಟಕ ಯೋಜನೆಯ ಆದೇಶದ ಅನುಬಂಧ 7,8. ಮತ್ತು 9ರಲ್ಲಿ ಖಾಸಗಿ ಆಸ್ಪತ್ರೆಗಳಿಗೆ ನಿಗಧಿಪಡಿಸಲಾಗಿರುವ ದರಗಳ ಶೇಕಡ 75ರಷ್ಟನ್ನು ಸರ್ಕಾರಿ ಆರೋಗ್ಯ ಸಂಸ್ಥೆಗಳಿಗೆ ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್ ಮೂಲಕ ಮರು ಪಾವತಿಸಲು ಸರ್ಕಾರವು ಅನುಮತಿಸಿ ಆದೇಶಿಸಿದೆ.

ಸರ್ಕಾರಿ ಆರೋಗ್ಯ ಸೇವಾ ಸಂಸ್ಥೆಗಳಿಗೆ ವಿಶೇಷ ಪ್ಯಾಕೇಜ್ ದರ ನೀಡಲು ಸಮಿತಿಯನ್ನು ರಚಿಸಿ ದರ ನಿಗದಿಪಡಿಸುವವರೆಗೂ ಅಥವಾ ದಿನಾಂಕ:31.03.2019ರವರೆಗೆ, ಅದರಲ್ಲಿ ಯಾವುದು ಮೊದಲು ಅಲ್ಲಿಯವರೆಗೆ ಸದರಿ ಮರುಪಾವತಿಯ ದರವು ಜಾರಿಯಲ್ಲಿರುತ್ತದೆ.

ಸಾರ್ವಜನಿಕ ಆರೋಗ್ಯ ಸಂಸ್ಥೆಗಳು ಸಂಕೀರ್ಣ ದ್ವೀತೀಯ ಹಂತದ ಆರೋಗ್ಯ ಆರೈಕೆ ಚಿಕಿತ್ಸೆಗೆ ಮತ್ತು ತೃತೀಯ ಹಂತದ ಆರೋಗ್ಯ ಆರೈಕೆ ಚಿಕಿತ್ಸೆಗಳಿಗೆ ಆರೋಗ್ಯ ಕರ್ನಾಟಕ ಯೋಜನೆ ಅಡಿ ಪಡೆದುಕೊಂಡ ಮರುಪಾವತಿ ಮೊತ್ತದ ಶೇಕಡ 10ರಷ್ಟನ್ನು ತನ್ನ ವೈದ್ಯಕೀಯ ಮತ್ತು ಅರೆ ವೈದ್ಯಕೀಯ ಸಿಬ್ಬಂದಿಗಳಿಗೆ ಉತ್ಪಾದನೆ ಆಧಾರಿತ ಪ್ರೋತ್ಸಾಹ ನೀಡಲು ಬಳಸಿಕೊಳ್ಳವುದು ಮತ್ತು ಉಳಿದ ಶೇಕಡ 90ರಷ್ಟು ಮೊತ್ತವನ್ನು ಸಾರ್ವಜನಿಕ ಆರೋಗ್ಯ ಸಂಸ್ಥೆಯ ಆರೋಗ್ಯ ರಕ್ಷ ಸಮಿತಿಯ (ಎಆರ್‌ಎಸ್) ನಿಧಿಯಲ್ಲಿ ಜಮಾ ಮಾಡತಕ್ಕದ್ದು, ಹಾಗೂ ಮಾರ್ಗಸೂಚಿಯಂತೆ ಆ ಹಣವನ್ನು ಆಸ್ಪತ್ರೆಯ ವೆಚ್ಚಕ್ಕಾಗಿ ಬಳಸತಕ್ಕದ್ದು.

ಈ ಆದೇಶವನ್ನು ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 274 ವೆಚ್ಚ-5 2018, ದಿನಾಂಕ:20-04-2018 ರಂದು ನೀಡಿರುವ ಸಹಮತಿಯ ಮೇರೆಗೆ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ,

26/4/2018
**(ಪದ್ಮ ವಿ.)**
ಸರ್ಕಾರದ ಅಧೀನ ಕಾರ್ಯದರ್ಶಿ(ಪ್ರ)
ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ
(ಆರೋಗ್ಯ 1 ಮತ್ತು 2)

**ಇವರಿಗೆ:**

1. ಪ್ರಧಾನ ಮಹಾಲೇಖಪಾಲರು, (ಜಿ & ಎಸ್‌ಎಸ್‌ಎ), ಕರ್ನಾಟಕ, ಹೊಸಕಟ್ಟಡ, "ಆಡಿಟ್ ಭವನ" ಬೆಂಗಳೂರು.
2. ಪ್ರಧಾನ ಮಹಾಲೇಖಪಾಲರು, (ಇ & ಆರ್‌ಎಸ್‌ಎ), ಕರ್ನಾಟಕ, ಹೊಸಕಟ್ಟಡ, ಆಡಿಟ್ ಭವನ, ಬೆಂಗಳೂರು.
3. ಪ್ರಧಾನ ಮಹಾಲೇಖಪಾಲರು( ಎ & ಇ), ಕರ್ನಾಟಕ, ಪಾರ್ಕ್‌ಹೌಸ್ ರಸ್ತೆ, ಬೆಂಗಳೂರು.
4. ಆಯುಕ್ತರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು-09.
5. ಕಾರ್ಯಕಾರಿ ನಿರ್ದೇಶಕರು, ಸುವರ್ಣ ಆರೋಗ್ಯ ಸುರಕ್ಷಾ ಟ್ರಸ್ಟ್, ಬಿ.ಎಂ.ಟಿ.ಸಿ.-ಟಿ.ಟಿ.ಎಂ.ಸಿ. ಎ ಬ್ಲಾಕ್, ಶಾಂತಿನಗರ, ಕೆ.ಹೆಚ್.ರೋಡ್, ಬೆಂಗಳೂರು.
6. ನಿರ್ದೇಶಕರು, ಖಜಾನೆ ನಿರ್ದೇಶನಾಲಯ, ಬೆಂಗಳೂರು-01.
7. ನಿರ್ದೇಶಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸೇವೆಗಳು, ಬೆಂಗಳೂರು-09.

**ಪ್ರತಿಯನ್ನು:**

1. ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಯವರ ಆಪ್ತ ಕಾರ್ಯದರ್ಶಿ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸಸೌಧ, ಬೆಂಗಳೂರು.
2. ಸರ್ಕಾರದ ಉಪ ಕಾರ್ಯದರ್ಶಿ-2ರವರ ಆಪ್ತ ಸಹಾಯಕರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ.
3. ಸರ್ಕಾರದ ಅಧೀನ ಕಾರ್ಯದರ್ಶಿ,ಆರ್ಥಿಕ ಇಲಾಖೆ,(ವೆಚ್ಚ-5), ವಿಧಾನಸೌಧ, ಬೆಂಗಳೂರು.
4. ಉಪ ಕಾರ್ಯದರ್ಶಿ,ಆಂತರಿಕ ಆರ್ಥಿಕ ಸಲಹೆಗಾರರು, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಕಾಸೌಧ, ಬೆಂಗಳೂರು.
5. ಶಾಖಾ ರಕ್ಷಾ ಕಡತ/ ಹೆಚ್ಚುವರಿ ಪ್ರತಿಗಳು.

SAST